## ಪೊಲೀಸ್ ಕಮೀಷನರ್, ಹುಬ್ಬಳ್ಳಿ-ಧಾರವಾಡ ನಗರ ರವರ ಕಾರ್ಯಾಲಯ,

## ಅಧಿಸೂಚನೆ

**ಸಂಖ್ಯೆ:ಸಿಪಿ/ಸಾಮಾನ್ಯ/265/2020** **ದಿನಾಂಕ: 18-01-2020**

ಮಾಹಿತಿ ಹಕ್ಕು ಅಧಿನಿಯಮ 2005ರ (ಕೇಂದ್ರ ಕಾಯ್ದೆ 2005ರ ಸಂ.22) ಸೆಕ್ಷನ್ 4(1)(b)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುಬ್ಬಳ್ಳಿ-ಧಾರವಾಡ ನಗರದ ಪೊಲೀಸ್ ಆಯುಕ್ತರ ವ್ಯಾಪ್ತಿಗೆ ಒಳಪಡುವ ವಿವರವಾದ ಮಾಹಿತಿಯನ್ನು ದಿನಾಂಕ:31/12/2019 ರಂದು ಇದ್ದಂತೆ ಸಾರ್ವಜನಿಕರ ಮಾಹಿತಿಗಾಗಿ ಈ ಕೆಳಕಂಡಂತೆ ಪ್ರಕಟಗೊಳಿಸಲಾಗಿದೆ.

ಹುಬ್ಬಳ್ಳಿ-ಧಾರವಾಡ ನಗರದ ಪೊಲೀಸ್ ಕಮೀಷನರ್ ರವರ ಕಾರ್ಯಾಲಯವು ಹುಬ್ಬಳ್ಳಿಯ ನವನಗರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹುಬ್ಬಳ್ಳಿ-ಧಾರವಾಡ ನಗರದ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳನ್ನು ಕೆಳಕಂಡ ವಿಭಾಗಗಳಾಗಿ ವಿಂಗಡಿಸಲಾಗಿದೆ.

1. ಕಾನೂನು ಮತ್ತು ಸುವ್ಯವಸ್ಥೆ ಪಾಲನೆ
2. ಅಪರಾಧಗಳನ್ನು ತಡೆಗಟ್ಟುವುದು ಹಾಗೂ ಅಪರಾಧಿಗಳನ್ನು ಪತ್ತೆ ಹಚ್ಚುವುದು.
3. ಸುಗಮ ಸಂಚಾರ ವ್ಯವಸ್ಥೆ
4. ಆಡಳಿತ
5. ಸಶಸ್ತ್ರ ಮೀಸಲು ಪಡೆ.

### (i) ಈ ಘಟಕದ ಸಂಘಟನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು

ಹುಬ್ಬಳ್ಳಿ-ಧಾರವಾಡ ನಗರದ ಪೊಲೀಸ್ ಕಮೀಷನರೇಟ್‌ಗೆ ಸಂಬಂಧಿಸಿದ ಸಂಘಟನೆಯ ವಿವರವನ್ನು ಅನುಬಂಧ-1 ರಲ್ಲಿ ಮತ್ತು ಘಟಕದ ಮಂಜೂರಾತಿ ಬಲ, ವಾಸ್ತವ ಬಲ ಮತ್ತು ರಿಕ್ತ ಸ್ಥಾನಗಳ ವಿವರಗಳನ್ನು ಅನುಬಂಧ-2 ರಲ್ಲಿ ತೋರಿಸಲಾಗಿದೆ.

ಈ ಘಟಕದಲ್ಲಿ ಡಿ.ಐ.ಜಿ.ಪಿ. ದರ್ಜೆಯ ಅಧಿಕಾರಿಯು ಪೊಲೀಸ್ ಕಮೀಷನರ್‌ರಾಗಿ, ಎಸ್.ಪಿ. ದರ್ಜೆಯ ಮೂರು ಜನ ಡಿ.ಸಿ.ಪಿ. ಗಳು ಹಾಗೂ 4 ಉಪ ವಿಭಾಗಗಳಲ್ಲಿ ಎ.ಸಿ.ಪಿ.ಗಳು ಉಸ್ತುವಾರಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಘಟಕದಲ್ಲಿ 15 ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳು, 4 ಸಂಚಾರ ಪೊಲೀಸ್ ಠಾಣೆಗಳು ಹಾಗೂ 1 ಮಹಿಳಾ ಪೊಲೀಸ್ ಠಾಣೆ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ ನಗರ ವಿಶೇಷ ವಿಭಾಗ, ಅಪರಾಧ ದಾಖಲಾತಿ ವಿಭಾಗ, ಸಿಸಿಬಿ ವಿಶೇಷ ಪೊಲೀಸ್ ಠಾಣೆ, ಅಪರಾಧ ಪತ್ತೆ ದಳ ಮತ್ತು ಬೆರಳು ಮುದ್ರೆ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

ಕಾನೂನು ಮತ್ತು ಸುವ್ಯವಸ್ಥೆ ಪಾಲನೆ, ಸಿಬ್ಬಂದಿಗಳಿಗೆ ತರಬೇತಿ, ಖೈದಿಗಳ ಬೆಂಗಾವಲು ಕರ್ತವ್ಯ, ಬ್ಯಾಂಕ್ ಕರೆನ್ಸಿ ಚೆಸ್ಟ್‌ಗಳ ಬೆಂಗಾವಲು ಕರ್ತವ್ಯ ಹಾಗೂ ತುರ್ತು ಕೆಲಸಗಳಿಗಾಗಿ ಸಶಸ್ತ್ರ ಮೀಸಲು ಪಡೆಯನ್ನು ರಚಿಸಲಾಗಿದೆ. ಅಲ್ಲದೆ ಹುಬ್ಬಳ್ಳಿ ವಿಮಾನ ನಿಲ್ದಾಣದ ಭದ್ರತೆಗಾಗಿ ಹಾಗೂ ಕೆಲವೊಂದು ಬ್ಯಾಂಕುಗಳ ಭದ್ರತೆಗೆ ಭದ್ರತಾ ಪಡೆಯನ್ನು ರಚಿಸಲಾಗಿದೆ. ಸಶಸ್ತ್ರ ಮೀಸಲು ಪಡೆ ಉಸ್ತುವಾರಿ ಕರ್ತವ್ಯವನ್ನು ಎಸ್.ಪಿ. ದರ್ಜೆಯ ಅಧಿಕಾರಿಯಾದ ಡಿ.ಸಿ.ಪಿ., (ಸಿ.ಎ.ಆರ್) ರವರು ನಿರ್ವಹಿಸುತ್ತಿರುತ್ತಾರೆ.

ಹುಬ್ಬಳ್ಳಿ–ಧಾರವಾಡ ನಗರಕ್ಕೆ ಮಂಜೂರಾಗಿರುವ ಒಟ್ಟು 2371 ಅಧಿಕಾರಿ ಹಾಗೂ ಸಿಬ್ಬಂದಿಗಳ ನೇಮಕಾತಿ, ಮುಂಬಡ್ತಿ, ವೇತನ, ರಜೆ, ಸೇವಾ ಪುಸ್ತಕಗಳ ನಿರ್ವಹಣೆ ಇತ್ಯಾದಿ ಆಡಳಿತಕ್ಕೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ಲಿಪಿಕ ಸಿಬ್ಬಂದಿಗಳನ್ನೊಳಗೊಂಡ ಆಡಳಿತ ವಿಭಾಗವನ್ನು ರಚಿಸಲಾಗಿದೆ.

**(ii) <u>ಅಧಿಕಾರಿ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು ;</u>**

ಹುಬ್ಬಳ್ಳಿ–ಧಾರವಾಡ ನಗರದ ಪೊಲೀಸ್ ಕಮೀಷನರೇಟ್ ಗೃಹ ಇಲಾಖೆಯ ಹಾಗೂ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ರವರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಭಾರತ ಸರ್ಕಾರದಿಂದ ಹಾಗೂ ಕರ್ನಾಟಕ ಸರ್ಕಾರದ ಗೃಹ ಇಲಾಖೆಯಿಂದ ಹೊರಡಿಸಿರುವ ನೀತಿ ನಿಯಮಗಳ ಅಂದರೆ ಭಾರತ ದಂಡ ಸಂಹಿತೆ, ಅಪರಾಧ ಪ್ರಕ್ರಿಯೆ ಸಂಹಿತೆ, ಭಾರತ ಸಾಕ್ಷ್ಯ ಅಧಿನಿಯಮ, ಕರ್ನಾಟಕ ಪೊಲೀಸ್ ಕಾಯ್ದೆ, ವರದಕ್ಷಿಣೆ ವಿರೋಧಿ ಕಾಯ್ದೆ, ಮೋಟಾರು ವಾಹನ ಅಧಿನಿಯಮ, ಕರ್ನಾಟಕ ಅರಣ್ಯ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ, ಮಕ್ಕಳ ಕಾಯ್ದೆ ಇತ್ಯಾದಿ ಗೃಹ ಇಲಾಖೆಗೆ ಸಂಬಂಧಿಸಿದಂತೆ ಹೊರಡಿಸಿರುವ ಕಾಯ್ದೆಗಳಲ್ಲಿ ಪ್ರದತ್ತವಾದ ಅಧಿಕಾರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕಾನೂನು ಮತ್ತು ಸುವ್ಯವಸ್ಥೆ, ಶಾಂತಿಪಾಲನೆ, ಅಪರಾಧಗಳ ತಡೆಗಟ್ಟುವಿಕೆ, ಅಪರಾಧಗಳನ್ನು ಪತ್ತೆ ಮಾಡುವುದು, ಸಂಚಾರ ಸುವ್ಯವಸ್ಥೆ ಇವುಗಳು ಪ್ರಮುಖ ಕರ್ತವ್ಯಗಳಾಗಿರುತ್ತವೆ.

ಹುಬ್ಬಳ್ಳಿ–ಧಾರವಾಡ ನಗರದ ಪೊಲೀಸ್ ಆಯುಕ್ತರು, ಸರ್ಕಾರಿ ಅಧಿಸೂಚನೆ ಸಂಖ್ಯೆ:ಹೆಚ್‌ಡಿ:1001: ಪಿಸಿಸಿ:89 ದಿನಾಂಕ: 17/10/1989 ರನ್ವಯ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ ಹಾಗೂ ಕಾರ್ಯನಿರ್ವಾಹಕ ದಂಡಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಾರೆ.

**(iii) <u>ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗ ಒಳಗೊಂಡಂತೆ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯ ವಿಧಾನ ;</u>**

**<u>1) ಪೊಲೀಸ್ ಠಾಣೆ:–</u>**

ಸಾರ್ವಜನಿಕರಿಂದ ಬರುವ ದೂರುಗಳನ್ನು ಠಾಣಾಧಿಕಾರಿಗಳು ಪರಿಶೀಲಿಸಿ ಸೂಕ್ತ ಕಲಂ ಗಳಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಕೂಡಲೇ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಒಂದು ಪ್ರತಿಯನ್ನು ಫಿರ್ಯಾದುದಾರರಿಗೆ ನೀಡಲಾಗುವುದು. ಠಾಣಾಧಿಕಾರಿಗಳು ಪ್ರಕರಣದ ತನಿಖೆಯನ್ನು ಕೈಗೊಂಡು ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವುದು.

ಒಂದು ವೇಳೆ ದೂರುದಾರರು ನೀಡಿರುವ ದೂರು ಸಿವಿಲ್ ವ್ಯಾಜ್ಯಗಳಿಗೆ ಸಂಬಂಧಪಟ್ಟಿದ್ದಲ್ಲಿ ಎನ್.ಸಿ.ಆರ್. ದಾಖಲಿಸಿ ಸೂಕ್ತ ಹಿಂಬರಹ ನೀಡುವುದು.

ಸಾರ್ವಜನಿಕರು ನೀಡುವ ದೂರಿನ ಬಗ್ಗೆ ಕ್ರಮ ತೆಗೆದುಕೊಳ್ಳಲು ಯಾವುದಾದರೂ ಕ್ಲಿಷ್ಟ ಪರಿಸ್ಥಿತಿ ಉದ್ಭವಿಸಿದಲ್ಲಿ ಠಾಣಾಧಿಕಾರಿಯು ಉಸ್ತುವಾರಿ ಅಧಿಕಾರಿಗಳಾದ ಎ.ಸಿ.ಪಿ., ಡಿ.ಸಿ.ಪಿ. ಹಾಗೂ ಪೊಲೀಸ್ ಕಮೀಷನರ್ ರವರ ಸಲಹೆ ಹಾಗೂ ಮಾರ್ಗದರ್ಶನ ಪಡೆದು ಕಾರ್ಯ ನಿರ್ವಹಿಸುವರು.

ಅಲ್ಲದೆ ಠಾಣಾ ಸರಹದ್ದಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪಾಲನೆ ಹಾಗೂ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಿಬ್ಬಂದಿಗಳ ಗಸ್ತು ವ್ಯವಸ್ಥೆಯನ್ನು ಮಾಡುವರು.

**2) ಸಂಚಾರ ಠಾಣೆ:–**

ಸುಗಮ ಸಂಚಾರ ಸುವ್ಯವಸ್ಥೆ ಮಾಡುವುದು, ಅಪಘಾತಗಳು ಸಂಭವಿಸಿದಾಗ ಪ್ರಕರಣಗಳನ್ನು ದಾಖಲಿಸಿ ಕಾನೂನಿನ ರೀತ್ಯ ತನಿಖೆಯನ್ನು ಕೈಗೊಂಡು ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸುವುದು. ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಸರ್ಕಾರ ಆಗಿಂದಾಗ್ಗೆ ನೀಡುವ ಆದೇಶಗಳಿಗೆ ಅನುಸಾರವಾಗಿ ಕಾನೂನಿನ ರೀತ್ಯ ಸ್ಥಳ ದಂಡವನ್ನು ವಿಧಿಸುವುದು.

**3) ಮಹಿಳಾ ಪೊಲೀಸ್ ಠಾಣೆ:–**

ಮಹಿಳೆಯರ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ನೀಡುವ ದೂರುಗಳನ್ನು ದಾಖಲಿಸಿ ತನಿಖೆಯನ್ನು ಕೈಗೊಂಡು ನ್ಯಾಯಾಲಯಕ್ಕೆ ವರದಿ ಸಲ್ಲಿಸುವುದು. ಅಲ್ಲದೇ ಪತಿ ಪತ್ನಿಯರ ನಡುವೆ ಉದ್ಭವಿಸುವ ಸಮಸ್ಯೆಗಳನ್ನು ಕೌನ್ಸಲಿಂಗ್ ಮೂಲಕ ಬಗೆಹರಿಸಲು ಕ್ರಮ ಜರುಗಿಸುತ್ತಾರೆ.

**(iv) ಕಾರ್ಯಗಳ ನಿರ್ವಹಣೆಗೆ ಅಳವಡಿಸಿಕೊಂಡಿರುವ ಸೂತ್ರಗಳು ;**

ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗದಂತೆ ಹಾಗೂ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಪ್ರತಿ ವಾರ ಎಲ್ಲಾ ಪೊಲೀಸ್ ಅಧಿಕಾರಿಗಳ ಸಭೆಯನ್ನು ನಡೆಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸಾರ್ವಜನಿಕರಿಂದ ಬರುವ ದೂರುಗಳಿಗೆ ಕೂಡಲೇ ಕಾನೂನುಬದ್ಧವಾಗಿ ಕ್ರಮ ಜರುಗಿಸಲಾಗುವುದು. ಸಂಚಾರ ಸುವ್ಯವಸ್ಥೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಹಾಗೂ ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಸಂಘ ಸಂಸ್ಥೆಗಳ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಪಡೆದು ಕ್ರಮ ತೆಗೆದುಕೊಳ್ಳಲಾಗುವುದು.

**(v) ಇಲಾಖೆಯಲ್ಲಿನ ನೌಕರರು ಪ್ರಕಾರ್ಯಗಳ ನಿರ್ವಹಣೆಗೆ ಬಳಸುತ್ತಿರುವ ಇಲಾಖೆಯಲ್ಲಿರುವ/ಇಲಾಖೆಯ ಅಧೀನದಲ್ಲಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿಗಳು ಮತ್ತು ದಾಖಲೆಗಳು.**

*ತನಿಖೆಗೆ ಸಂಬಂಧಿಸಿದಂತೆ:–*

1) ಭಾರತ ದಂಡ ಸಂಹಿತೆ.
2) ಅಪರಾಧ ದಂಡ ಪ್ರಕ್ರಿಯೆ ಸಂಹಿತೆ.
3) ಭಾರತ ಸಾಕ್ಷ್ಯ ಅಧಿನಿಯಮ.
4) ಕರ್ನಾಟಕ ಪೊಲೀಸ್ ಕಾಯ್ದೆ.
5) ವರದಕ್ಷಿಣೆ ವಿರೋಧ ಕಾಯ್ದೆ.
6) ಮಕ್ಕಳ ಕಾಯ್ದೆ 1960.
7) ವೇಶ್ಯಾವಾಟಿಕೆ (ತಡೆಗಟ್ಟುವ) ಕಾಯ್ದೆ 1956.
8) ಜುವೆನಲ್ ಜಸ್ಟೀಸ್ ಕಾಯ್ದೆ 1986.
9) ಮೋಟಾರು ವಾಹನ ಕಾಯ್ದೆ 1988.
10) ಅರಣ್ಯ ಕಾಯ್ದೆ 1980
11) ಅಬಕಾರಿ ಕಾಯ್ದೆ
12) ಅಗತ್ಯ ವಸ್ತುಗಳ ಕಾಯ್ದೆ 1955
13) ಸ್ಫೋಟಕ ವಸ್ತುಗಳ ಕಾಯ್ದೆ 1884
14) ಮಾಧಕ ವಸ್ತುಗಳ ಅಧಿನಿಯಮ (ಎನ್.ಡಿ.ಪಿ.ಎಸ್.) 1985
15) ರಾಷ್ಟ್ರೀಯ ಭದ್ರತಾ ಕಾಯ್ದೆ 1980
16) ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ 1881
17) ಅಫಿಷಿಯಲ್ ಸೀಕ್ರೆಟ್ ಆಕ್ಟ್ 1923
18) ಲಂಚ ನಿರ್ಮೂಲನಾ ಕಾಯ್ದೆ 1988
19) ಜೂಜಾಟ ಕಾಯ್ದೆ 1967
20) ವಿದೇಶಿಯರ ನೊಂದಣಿ ಕಾಯ್ದೆ 1939
21) ಪಾಸ್‌ಪೋರ್ಟ್ ಕಾಯ್ದೆ 1967
22) ಎಸ್.ಸಿ. ಮತ್ತು ಎಸ್.ಟಿ. (ದೌರ್ಜನ್ಯ ತಡೆಗಟ್ಟುವ) ಕಾಯ್ದೆ 1989
23) ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ 1955
24) ವನ್ಯಜೀವಿ ಸಂರಕ್ಷಣಾ ಕಾಯ್ದೆ 1972
25) ಕಾಪಿರೈಟ್ ಕಾಯ್ದೆ
26) ಕಾರ್ಮಿಕ ಕಾಯ್ದೆ
27) ಇತರೆ ಕಾಯ್ದೆ & ಕಾನೂನುಗಳು.

ಅಲ್ಲದೆ ಇತರೆ ವಿಶೇಷ ಮತ್ತು ಸ್ಥಳೀಯ ಕಾಯ್ದೆಗಳಡಿಯಲ್ಲಿ ಕರ್ತವ್ಯ ನಿರ್ವಹಿಸುವುದು ಹಾಗೂ ಸರ್ಕಾರದಿಂದ ಮೇಲಿಂದ ಮೇಲೆ ಹೊರಡಿಸುವ ಸೂತ್ತೋಲೆಗಳು ಮತ್ತು ನಿಯಮಾವಳಿಗಳನ್ವಯ ಕಾರ್ಯ ನಿರ್ವಹಿಸುವುದು.

<u>ಆಡಳಿತ ವಿಭಾಗಕ್ಕೆ ಸಂಬಂಧಿಸಿದಂತೆ:–</u>

1) ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965 ಹಾಗೂ ತಿದ್ದುಪಡಿ ನಿಯಮಗಳು 1989.
2) ಕರ್ನಾಟಕ ನಾಗರೀಕ ಸೇವಾ (ಪದೋನ್ನತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ 1978.
3) ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958.
4) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957.
5) ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು 1957.
6) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977.
7) ಕರ್ನಾಟಕ ನಾಗರೀಕ ಸೇವಾ (ಅರ್ಹತಾ ಪರೀಕ್ಷೆ) ನಿಯಮಗಳು 1977.
8) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966.
9) ಕರ್ನಾಟಕ ನಾಗರೀಕ ಸೇವಾ (ವೈದ್ಯೋಪಚಾರ) ನಿಯಮಗಳು 1963.
10) ಕರ್ನಾಟಕ ಆರ್ಥಿಕ ಸಂಹಿತೆ.
11) ಕರ್ನಾಟಕ ಖಜಾನೆ ನೀತಿ ಸಂಹಿತೆ.
12) ಸಾದಿಲ್ವಾರು ವೆಚ್ಚಗಳ ಕೈಪಿಡಿ.
13) ಕರ್ನಾಟಕ ರಾಜ್ಯ ಪೊಲೀಸ್ (ಲಿಪಿಕ ಸೇವೆಗಳು ಸೇರಿದಂತೆ) ನೇಮಕಾತಿ ನಿಯಮಗಳು 2004.
14) ಕರ್ನಾಟಕ ಪೊಲೀಸ್ ಕೈಪಿಡಿ
15) ಸರ್ಕಾರದ ಆದೇಶಗಳು, ಸುತ್ತೋಲೆಗಳು ಮತ್ತು ಪೊಲೀಸ್ ಪ್ರಧಾನ ಕಛೇರಿಯಿಂದ ಹೊರಡಿಸುವ ಸುತ್ತೋಲೆಗಳು ನಿರ್ದೇಶನಗಳು ಇತರೆ ಲಿಖಿತ ಪತ್ರಗಳು.

**(vi)** **<u>ಇಲಾಖೆಯು ಹೊಂದಿರುವ ಅಥವಾ ಇಲಾಖೆಯ ಸ್ವಾಧೀನದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ.</u>**

**<u>ಪೊಲೀಸ್ ಠಾಣೆಗಳಲ್ಲಿ:</u>**

1) ಠಾಣಾ ದಿನಚರಿ.
2) ಅಪರಾಧ ನೊಂದಣಿ ಪುಸ್ತಕ.
3) ಸರ್ಕಾರಿ ಸ್ವತ್ತು ಪುಸ್ತಕ.
4) ಕರ್ತವ್ಯ ಸರದಿ ಪುಸ್ತಕ.
5) ಹಗಲು ಮತ್ತು ರಾತ್ರಿ ಗಸ್ತು ಪುಸ್ತಕ.
6) ಗಸ್ತು ಮಾಹಿತಿ ಪುಸ್ತಕ.
7) ಪಾಯಿಂಟ್ ಪುಸ್ತಕ.
8) ಪಿಸಿ ಮತ್ತು ಹೆಚ್‌ಸಿ ಗಳ ದೈನಂದಿನ ಕರ್ತವ್ಯ ನಿರ್ವಹಣಾ ಪುಸ್ತಕ.
9) ವ್ಯವಹರಣೆಗಳ ಪುಸ್ತಕ. (Process Register)
10) ಮುದ್ದೆ ಮಾಲು ಪುಸ್ತಕ (Property Register)
11) ಅಪರಾಧ ಅಂಗ ಶೋಧನಾ ಪುಸ್ತಕ (P.S.R.)
12) ಬಂಧನದ ವರದಿ. (Arrest Card)
13) ಬಂಧಮುಕ್ತ ಪುಸ್ತಕ. (Bail bond)
14) ಮೇಲಾಧಿಕಾರಿ ಭೇಟಿ ಪುಸ್ತಕ
15) ಆಯುಧ ಪರವಾನಗೆ ಪುಸ್ತಕ
16) ಆಯುಧ ಠೇವಣಿ ಪುಸ್ತಕ

17) ಪಹರೆ ಪುಸ್ತಕ. (Sentry Relief Book)
18) ಲಾಕ್ ಅಪ್ ಗಾರ್ಡ್ ಪುಸ್ತಕ
19) ರಹದಾರಿ ಪತ್ರ.
20) ಬಸ್ ವಾರೆಂಟ್ ಪುಸ್ತಕ
21) ಟಪಾಲು ಪುಸ್ತಕ
22) ಶೋಧನಾ ಪತ್ರದ ವಹಿ. (Search Register)
23) ಆಕಸ್ಮಿಕ ರಜೆಯ ವಹಿ
24) ಗಳಿಕೆ ರಜೆಯ ವಹಿ
25) ವರ್ಕ್ ಷೀಟ್
26) ದಂಡನಾ ಪುಸ್ತಕ
27) ಕಿಟ್ ಪುಸ್ತಕ
28) ವೈದ್ಯಕೀಯ ಚರಿತ್ರಾ ಪುಸ್ತಕ
29) ಸಣ್ಣ ಪ್ರಕರಣದ ದಾಖಲಾತಿ ಪುಸ್ತಕ
30) ರೌಡಿ ಶೀಟ್
31) ತ್ರೈಮಾಸಿಕ ಅಪರಾದ ವಹಿ. (QCR)
32) ಚರಿತ್ರಾಹೀನ ಪುಸ್ತಕ. (H.S.)
33) ಸಾಮಾನ್ಯ ಸಜೆ ಪುಸ್ತಕ (General Conviction Register)
34) ಅಸ್ವಾಭಾವಿಕ ಮರಣ ವಹಿ (U.D.R.)
35) ಪೂರ್ವಸಜಾ ಆಸಾಮಿ ಪುಸ್ತಕ (Ex. Convict Register)
36) ಎಂ.ಒ.ಬಿ.
37) ಅರ್ಜಿ ವಿಚಾರಣಾ ಪುಸ್ತಕ (Petition Register)
38) ಟೆಲಿಫೋನ್ ರಿಜಿಸ್ಟರ್
39) ನಗದು ಪುಸ್ತಕ

**ಆಡಳಿತ ವಿಭಾಗ:**

1) ಪೊಲೀಸ್ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಸೇವಾ ಪುಸ್ತಕಗಳು.
2) ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳು.
3) ಆಸ್ತಿ ಮತ್ತು ಹೊಣೆಗಾರಿಕೆ ತಖ್ತೆಗಳು.
4) ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಸರ್ಕಾರಿ ಆದೇಶಗಳು ಮತ್ತು ಸುತ್ತೋಲೆಗಳು.

**(vii) ಕಾರ್ಯ ನೀತಿಯನ್ನು ರೂಪಿಸಲು ಅಥವಾ ಅನುಷ್ಠಾನಗೊಳಿಸುವ ಬಗ್ಗೆ ಜನ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಅಥವಾ ಪ್ರಾತಿನಿಧ್ಯಕ್ಕೆ ಇರುವ ವ್ಯವಸ್ಥೆಗಳ ವಿವರಗಳು:**

ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾರ್ವಜನಿಕರು ಹಾಗೂ ಜನ ಪ್ರತಿನಿಧಿಗಳ ಜೊತೆ ಸಮಾಲೋಚಿಸಲು ಪ್ರತಿ ಠಾಣಾ ಸರಹದ್ದಿನಲ್ಲಿ "**ನಾಗರೀಕ ಸಮಿತಿ**"ಗಳನ್ನು ರಚಿಸಲಾಗಿದೆ. ಹಾಗೂ

ಠಾಣಾ ಮಟ್ಟದಲ್ಲಿ ಮೊಹಲ್ಲಾ ಮೀಟಿಂಗ್‌ಗಳನ್ನು ಸಹ ಏರ್ಪಡಿಸಲು ಆದೇಶಿಸಿದ್ದು ಅದರಂತೆ ಮೇಲಿಂದ ಮೇಲೆ ಮೊಹಲ್ಲಾ ಮೀಟಿಂಗ್‌ಗಳು ನಡೆಸಲಾಗುತ್ತಿದೆ.  ಈ ಸಮಿತಿಗಳ ಮೂಲಕ ಪೊಲೀಸರು ಹಾಗೂ ಸಾರ್ವಜನಿಕರ ಸಭೆಗಳನ್ನು ಆಗಾಗ್ಗೆ ನಡೆಸಿ ಕಾನೂನು ಮತ್ತು ಸುವ್ಯವಸ್ಥೆ ಪಾಲನೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅಲ್ಲದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರುಗಳ ಸಭೆ ಹಾಗೂ ಇತ್ಯಾದಿ ಸಾರ್ವಜನಿಕರ ಅಗತ್ಯತೆಯ ಅನುಕೂಲಕ್ಕೆ ತಕ್ಕಂತೆ ಆಗಿಂದಾಗ್ಗೆ ಸಭೆಗಳನ್ನು ನಡೆಸಲಾಗುತ್ತುದೆ.

## (viii) ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ : (DIRECTORY)

### HUBLI-DHARWAD POLICE OFFICER LIST (As on 31/12/2019)

| NAME AND DESIGNATION | Official Mobile | CUG No. | Office | Resi. |
|---|---|---|---|---|
| Sri. Dileep.R, IPS,COP Hubli-Dharwad | 94808-02001 | #42301 | 2233500 | 2233400 |
| Sri. Nagesh.D.L IPS, DCP (L &O), H-D | 94808-02005 | #42305 | 2233501 | 2233401 |
| Sri. B.S.Nemagoud, DCP (Cr & Tr), H-D | 94808-02003 | #42303 | 2233502 | 2233402 |
| Sri. S.V.Yadav, DCP CAR, H-D | 94808-02004 | #42304 | 2233503 | 2233403 |
| Sri. M.V.Mallapur, ACP, South, Hubli | 94808-02011 | #41434 | 2233507 | 2233407 |
| Sri. S.M.Ragi, ACP, North, HBL. | 94808-02012 | #41435 | 2233505 | 2233405 |
| Sri. S.M.Sandigwad.ACP, traffic, h-d | 94808-02013 | #41436 | 2233504 | 2233404 |
| Sri. Rudrappa.M.N, ACP Dharwad | 94808-02014 | #41437 | 2233506 | 2233406 |
| Smt. N.Pushpalatha,ACP CCRB,Hubli | 94808-02015 | #44570 | 2233461 | 2233418 |
| Sri B.S.Chavan, ACP FPB | 94808-00484 | - | 2233539 | -- |
| **South Sub-Division, Hubli** | | | | |
| Sri. M.S.Patil, PI, Town PS, Hbl | 94808-02021 | #41438 | 2233540 | 2233440 |
| Sri. M.S.Gullari, PI, Old Hubli PS. | 94808-02024 | #41441 | 2233541 | 2233441 |
| Sri S.S.Sajjan, PI , Kasabapeth P.S. Hbl | 94808-02023 | #41440 | 2233536 | 2233436 |
| Sri .Mahantesh.B. Holi, PI, Ghantikeri PS, Hb | 94808-02022 | #41439 | 2233527 | 2233427 |
| Sri. A.V.Salunke, PI Bendigeri PS, Hbl | 94808-02025 | #41442 | 2233526 | -- |
| **North Sub-Division , Hubli** | | | | |
| Sri. S.K.Holennavar PI Sub urban P.S. Hubli | 94808-02030 | #41448 | 2233517 | 2233417 |
| Sri. S.B.Kumbar, PI, Keshwapur P.S. Hbl | 94808-02026 | #41443 | 2233518 | 2233418 |
| Sri. A.M.Vanakudari, PI Vidyangar P.S. Hubli | 94808-02027 | #41444 | 2233516 | 2233416 |
| Sri. Bharathreddy.S.R. I/c PI Kamaripeth PS, Hbl | 94808-02028 | #41446 | 2233519 | 2233419 |
| Sri. N.M.Kammar, PI Gokul Road PS, Hbl | 94808-02047 | #44577 | 2233525 | 2233425 |
| Sri Ashok Chavan, PI Women PS Hbl | 94808-02031 | #41449 | 2233514 | 2233414 |
| Sri. P.B.Surin, PI, APMC, Navangar, Hbl | 94808-02039 | #44572 | 2233492 | -- |
| Sri. Ravichandra.D.B, PI Ashok Nagar P.S. | 94808-02038 | #44571 | 2233490s | 2233426 |
| **Dharwad Sub-Division.** | | | | |
| Sri. S.V.Sutare,, PI Town PS, Dwd | 94808-02032 | #41450 | 2233512 | 2233412 |
| Sri, P.C.Yaligar, PI, Sub urban PS, Dwd. | 94808-02033 | #41451 | 2233511 | -- |
| Sri. M.K.Basapur, PI Vidyagiri PS Dwd | 94808-02034 | #41452 | 2233513 | 2233413 |
| **Traffic Sub-Division, H-D** | | | | |
| Sri. Ratanakuar Jirgyal, PI , North Traffic Hbl | 94808-02035 | #41453 | 2233515 | 2233415 |

| | | | | |
|---|---|---|---|---|
| Sri. M.V.Hospeth, PI South Traffic P.S. Hbl | 94808-02036 | #41454 | 2233538 | 2233438 |
| Sri, P.S.Naik,PI East traffic PS Hbl | 94808-02040 | #44573 | 2233543 | 2233493 |
| Sri. M.R.Channanavar, PI, Traffic PS, Dwd | 94808-02037 | #41455 | 2233542 | 2233442 |
| **COP Office :** | | | | |
| Sri. A.S.Kulkarni, I/c PI CSB | 94808-02041 | #44576 | 2233533 | 2233438 |
| Sri. Bharathreddy.S.R. PI CCB-1 | 9480802029 | #44574 | -- | -- |
| Sri. A.A.Kulkarni, PI CCB-2 | 9448415661 | -- | -- | -- |
| Sri. M.M.Nadaf, PI CCB-3 | 9448467171 | -- | -- | -- |
| Sri. Bharathreddy.S.R. PI CCB-4 | 9480802031 | -- | -- | -- |
| Sri. A.H.Mulla, PI CCIB | 9449011488 | -- | -- | -- |
| Sri. Nagaraj Kammar I/c PI, Airport PS | 94485-27933 | #46460 | 2233475 | |
| Sri. N.C.Kadadevar, PI, CCB Spl PS, Hbl | -- | - | 2233535 | 2233437 |
| Sri. D.K.Prabhugouda, PI, CCB Spl PS, Dwd | 94490-11488 | #44575 | 2233534 | - |
| Sri. S.M.Bhojappagol, RPI, MTO CAR, H-D | 94808-02045 | #44579 | 2233524 | - |
| Sri. Dileep.S.V. RPI CAR, H-D | 94808-02044 | #44578 | 2233523 | 2233423 |
| Sri., M.S.Marol , RPI, CAR, H-D | 99006-19201 | -- | -- | -- |
| Sri. Pranesh Yavagal , PI Control Room | 94808-00928 | #42300 | 2233421 | 2233458 |
| Sri. B V Kavadikeri, AAO, COP Office, Hubli | 94808-02046 | #44580 | 2233528 | 2233422 |
| Sri. M.S.Hiremath, S.S. MAG Sec. | 9886122332 | -- | 2233522 | 2233428 |
| Sri. Satish Mokashi, S.S Act Section | 8884212249 | -- | 2233532 | 2233430 |
| Sri. B.A.Patil, S..S. EST Section | 9886649731 | -- | 2233529 | 2233429 |
| Sri. M.G.Akki, S.S. Store Section | 9916347779 | -- | 2233530 | - |
| Smt. S V Navale, PA to COP, H-D. | 97431-23010 | -- | 2233531 | 2233431 |
| CCRB Section | -- | -- | 2233544 | -- |
| Passport Section | -- | -- | 2233460 | -- |
| Computer Section | -- | -- | 2233551 | -- |
| Camp Office Hubli | -- | -- | 2233463 | -- |
| Sri. P.A.Ansari, ADP | -- | -- | 2233545 | -- |

**(ix)** **ನಿಯಮ/(ನಿಬಂಧನೆ)ಗಳಲ್ಲಿ ಉಪಬಂಧಿಸಿದಂತೆ, ಪರಿಹಾರ ಕ್ರಮವನ್ನು ಒಳಗೊಂಡಂತೆ, ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿರುವ ಸಂಭಾವನೆ ವಿವರಗಳು ;**

ಪ್ರಸ್ತುತ ಪ್ರಚಲಿತದಲ್ಲಿರುವ 2018 ರ ಪರಿಷ್ಕೃತ ವೇತನ ಶ್ರೇಣಿಯ ನಿಯಮಗಳನ್ವಯ ಹುಬ್ಬಳ್ಳಿ-ಧಾರವಾಡ ಪೋಲೀಸ್ ಕಮೀಷನರೇಟ್ ಘಟಕದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪ್ರತಿ ತಿಂಗಳ ವೇತನವನ್ನು ಪಾವತಿಸಲಾಗುತ್ತಿದೆ. ಕರ್ತವ್ಯಕ್ಕೆ ಗೈರು ಹಾಜರಾದ ಸಿಬ್ಬಂದಿಯವರ ವೇತನವನ್ನು ತಡೆಹಿಡಿದು ನಂತರ ಅವರ ರಜೆ ಬಗ್ಗೆ ಪರಿಶೀಲಿಸಿ ರಜೆ ಮಂಜೂರಾದ ನಂತರ ವೇತನವನ್ನು ಪಾವತಿಸಲಾಗುತ್ತದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಆದೇಶ ಅನುಸಾರ ಲಭ್ಯವಿರುವ ವಿಶೇಷ ಭತ್ಯೆಯನ್ನು ಪಾವತಿಸಲಾಗುತ್ತಿದೆ. ವೇತನವಲ್ಲದೆ ಯಾವುದೇ ಗೌರವ ಸಂಭಾವನೆ ಹಾಗೂ ಪ್ರತಿಫಲವನ್ನು ನೀಡುತ್ತಿರುವುದಿಲ್ಲ.

**(x) <u>ಯೋಜನೆಗಳ ವಿವರಗಳು ಪ್ರಾಸ್ತಾವಿಕ ವೆಚ್ಚಗಳು ಮತ್ತು ಬಟವಾಡೆ ಮಾಡಿದ ವರದಿಗಳನ್ನೊಳಗೊಂಡಂತೆ ಪ್ರತಿ ಏಜೆನ್ಸಿಗೂ ಹಂಚಿಕೆ ಮಾಡಿದ ಆಯವ್ಯಯ</u>**

ಹುಬ್ಬಳ್ಳಿ–ಧಾರವಾಡ ನಗರದ ಪೊಲೀಸ್ ಕಮೀಷನರೇಟ್ ಘಟಕವು ಯೋಜನೇತರ ಇಲಾಖೆಯಾಗಿದ್ದು, ಇಲ್ಲಿ ಯಾವುದೇ ಯೋಜನೆಯನ್ನು ರೂಪಿಸಿಲ್ಲವಾದ್ದರಿಂದ ಯೋಜನೆಗಳಿಗೆ ಸಂಬಂಧಿಸಿದಂತೆ ಆಯವ್ಯಯ ಹಂಚಿಕೆ ಕ್ರಮ ಇರುವುದಿಲ್ಲ.

**(xi) <u>ಹಣ ಹಂಚಿಕೆ ಮಾಡಿದ ವಿವರಗಳನ್ನೊಳಗೊಂಡಂತೆ ಕಾರ್ಯಕ್ರಮಗಳ, ಫಲಾನುಭವಿಗಳ ವಿವರ ಹಾಗೂ ಸಹಾಯ ಧನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ವಿಧಾನ</u>**

ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಕಮೀಷನರೇಟ್ ಘಟಕದಲ್ಲಿ ಯಾವುದೇ ಸಹಾಯಧನ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವುದಿಲ್ಲ.

**(xii) <u>ರಿಯಾಯಿತಿಗಳು, ಅಪ್ಪಣೆ ಪತ್ರಗಳು ಅಥವಾ ಅಧಿಕಾರ ಪತ್ರಗಳನ್ನು ಪಡೆದವರ ವಿವರಗಳು</u>**

ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಕಮೀಷನರೇಟ್ ಘಟಕದಲ್ಲಿ ಯಾವುದೇ ರಿಯಾಯಿತಿ, ಅಪ್ಪಣೆ ಪತ್ರ ಅಥವಾ ಅಧಿಕಾರ ಪತ್ರವನ್ನು ಮಂಜೂರು ಮಾಡಿರುವುದಿಲ್ಲ.

**(xiii) <u>ಈ ಘಟಕದಲ್ಲಿ ದೊರೆಯುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಇಳಿಸಿರುವ ಮಾಹಿತಿಗಳ ವಿವರಗಳು</u>**

ಹುಬ್ಬಳ್ಳಿ–ಧಾರವಾಡ ನಗರ ಘಟಕದ ಮಾಹಿತಿಯನ್ನು ವಿದ್ಯುನ್ಮಾನ ರೂಪಕ್ಕೆ ಇಳಿಸಿದ್ದು, ವೆಬ್‌ಸೈಟ್ www.hublidharwadpolice.com ವಿಳಾಸದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿರುತ್ತಾರೆ.

**(xiv) <u>ಗ್ರಂಥಾಲಯವನ್ನು ಸಾರ್ವಜನಿಕರ ಬಳಕೆಗೆ ನಿರ್ವಹಿಸಿದ್ದಲ್ಲಿ, ಗ್ರಂಥಾಲಯವು ಅಥವಾ ವಾಚನಾಲಯವು ಕಾರ್ಯನಿರ್ವಹಿಸುವ ಸಮಯ ಹಾಗೂ ಸಾರ್ವಜನಿಕರಿಗೆ ಮಾಹಿತಿಯನ್ನು ಪಡೆಯಲಿರುವ ಅನುಕೂಲತೆಗಳು.</u>**

ಹುಬ್ಬಳ್ಳಿ–ಧಾರವಾಡ ನಗರ ಪೊಲೀಸ್ ಕಮೀಷನರೇಟ್ ಘಟಕದಲ್ಲಿ ಸಾರ್ವಜನಿಕರಿಗಾಗಿ ಗ್ರಂಥಾಲಯ ಅಥವಾ ವಾಚನಾಲಯವನ್ನು ನಿರ್ವಹಿಸಿರುವುದಿಲ್ಲ.

**(xv) <u>ಸಾರ್ವಜನಿಕ ಸಂಪರ್ಕಾಧಿಕಾರಿಗಳ ಹೆಸರು, ಪದನಾಮ ಮತ್ತು ವಿಳಾಸ</u>**

ಪೊಲೀಸ್ ನಿರೀಕ್ಷಕರು, ನಗರ ವಿಶೇಷ ವಿಭಾಗ,
ಪೊಲೀಸ್ ಆಯುಕ್ತರ ಕಛೇರಿ, ನವನಗರ, ಹುಬ್ಬಳ್ಳಿ.
ದೂರವಾಣಿ: 2233533

**(xvi) ಮಾಹಿತಿ ಪಡೆಯುವ ಹಕ್ಕು ಅಧಿನಿಯಮ–2005 ಕಲಂ 5(1), 5(2) ಹಾಗೂ 19(1)ರ ಪ್ರಕಾರ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳೆಂದು ನೇಮಿಸಲಾಗಿದೆ.**

| | | |
|---|---|---|
| 1 | ಮಾಹಿತಿ ಪಡೆಯುವ ಹಕ್ಕು ಕಾಯ್ದೆ–2005<br>ಕಲಂ 5(1) ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ. | ಪೊಲೀಸ್ ಉಪ ಆಯುಕ್ತರು,<br>(ಕಾನೂನು ಮತ್ತು ಸುವ್ಯವಸ್ಥೆ)<br>ಹುಬ್ಬಳ್ಳಿ–ಧಾರವಾಡ ನಗರ |
| 2 | ಮಾಹಿತಿ ಪಡೆಯುವ ಹಕ್ಕು ಕಾಯ್ದೆ–2005<br>ಕಲಂ 5(2) ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ. | ಸಹಾಯಕ ಆಡಳಿತಾಧಿಕಾರಿ,<br>ಪೊಲೀಸ್ ಆಯುಕ್ತರ ಕಛೇರಿ,<br>ಹುಬ್ಬಳ್ಳಿ–ಧಾರವಾಡ ನಗರ |
| 3 | ಮಾಹಿತಿ ಪಡೆಯುವ ಹಕ್ಕು ಕಾಯ್ದೆ–2005<br>ಕಲಂ 19(1) ರ ಮೇಲ್ಮನವಿ ಪ್ರಾಧಿಕಾರ. | ಪೊಲೀಸ್ ಆಯುಕ್ತರು,<br>ಹುಬ್ಬಳ್ಳಿ–ಧಾರವಾಡ ನಗರ |

**ಈ ಕೆಳಕಂಡ ಅಧಿಕಾರಿಗಳನ್ನು ಮಾಹಿತಿ ಹಕ್ಕು ಅಧಿನಿಯಮ–2005 ರ ಅಡಿಯಲ್ಲಿ ಪೊಲೀಸ್ ಠಾಣೆಗಳಲ್ಲಿ ಹಾಗೂ ಎ.ಸಿ.ಪಿ. ರವರ ಕಛೇರಿಗಳಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಅಧಿಕಾರಿಗಳೆಂದು ನೇಮಕ ಮಾಡಲಾಗಿದೆ.**

| ಅ. ನಂ. | ಪೊಲೀಸ್ ಠಾಣೆಯ / ಕಛೇರಿಯ ಹೆಸರು | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರಿ |
|---|---|---|---|
| 1. | ಉಪನಗರ ಪೊಲೀಸ್ ಠಾಣೆ, ಹುಬ್ಬಳ್ಳಿ. | ಹಿರಿಯ ಪಿ.ಎಸ್.ಐ. | ಪಿ.ಐ. |
| 2. | ಕೇಶ್ವಾಪೂರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 3. | ಕಮರಿಪೇಟ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 4. | ಗೋಕುಲ ರೋಡ್ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 5. | ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 6. | ಅಶೋಕನಗರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 7. | ಎಪಿಎಂಸಿ ನವನಗರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 8. | ಶಹರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 9. | ಬೆಂಡಿಗೇರಿ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 10. | ಘಂಟಿಕೇರಿ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 11. | ಕಸಬಾಪೇಟ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 12. | ಹಳೇ–ಹುಬ್ಬಳ್ಳಿ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 13. | ಉತ್ತರ ಸಂಚಾರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 14. | ದಕ್ಷಿಣ ಸಂಚಾರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 15. | ಪೂರ್ವ ಸಂಚಾರ ಪೊಲೀಸ್ ಠಾಣೆ, ಹುಬ್ಬಳ್ಳಿ | ಹಿರಿಯ ಪಿ.ಎಸ್.ಐ. | ಪಿ.ಐ. |
| 16. | ಉಪನಗರ ಪೊಲೀಸ್ ಠಾಣೆ, ಧಾರವಾಡ | ಹಿರಿಯ ಪಿ.ಎಸ್.ಐ. | ಪಿ.ಐ. |
| 17. | ಶಹರ ಪೊಲೀಸ್ ಠಾಣೆ, ಧಾರವಾಡ | ಹಿರಿಯ ಪಿ.ಎಸ್.ಐ. | ಪಿ.ಐ. |
| 18. | ವಿದ್ಯಾಗಿರಿ ಪೊಲೀಸ್ ಠಾಣೆ, ಧಾರವಾಡ | ಹಿರಿಯ ಪಿ.ಎಸ್.ಐ. | ಪಿ.ಐ. |
| 19. | ಸಂಚಾರ ಪೊಲೀಸ್ ಠಾಣೆ, ಧಾರವಾಡ | ಹಿರಿಯ ಪಿ.ಎಸ್.ಐ. | ಪಿ.ಐ. |
| 20. | ಮಹಿಳಾ ಪೊಲೀಸ್ ಠಾಣೆ, ಹು–ಧಾ. | ಠಾಣಾ ಬರಹಗಾರರು | ಪಿ.ಐ. |

| | | | |
|---|---|---|---|
| 21. | ಎ.ಸಿ.ಪಿ. ಉತ್ತರ ಉಪ ವಿಭಾಗ, ಹುಬ್ಬಳ್ಳಿ. | ಠಾಣಾ ಬರಹಗಾರರು | ಎ.ಸಿ.ಪಿ. |
| 22. | ಎ.ಸಿ.ಪಿ. ದಕ್ಷಿಣ ಉಪ ವಿಭಾಗ, ಹುಬ್ಬಳ್ಳಿ. | ಠಾಣಾ ಬರಹಗಾರರು | ಎ.ಸಿ.ಪಿ. |
| 23. | ಎ.ಸಿ.ಪಿ. ಧಾರವಾಡ ಉಪ ವಿಭಾಗ, ಹುಬ್ಬಳ್ಳಿ | ಠಾಣಾ ಬರಹಗಾರರು | ಎ.ಸಿ.ಪಿ. |
| 24. | ಎ.ಸಿ.ಪಿ. ಸಂಚಾರ ಉಪ ವಿಭಾಗ, ಹು–ಧಾ. | ಠಾಣಾ ಬರಹಗಾರರು | ಎ.ಸಿ.ಪಿ. |

**(xvii) ಹೆಚ್ಚುವರಿ ಮಾಹಿತಿಗಳು :**

1. **ನಗರ ವಿಶೇಷ ವಿಭಾಗ, ಪೊಲೀಸ್ ಆಯುಕ್ತರ ಕಛೇರಿ, ಹುಬ್ಬಳ್ಳಿ–ಧಾರವಾಡ ನಗರ ದೂರವಾಣಿ ಸಂಖ್ಯೆ: 2233533**

   ಸಾರ್ವಜನಿಕರು ಪಾಸ್‌ಪೋರ್ಟ್, ವೀಸಾ, ಗುಣ ಮತ್ತು ನಡತೆಯ ಪರಿಶೀಲನೆ, ಧ್ವನಿವರ್ಧಕಗಳ ಉಪಯೋಗಕ್ಕಾಗಿ ಪರವಾನಿಗೆ, ಪ್ರತಿಭಟನೆ, ಮೆರವಣಿಗೆ ಇತ್ಯಾದಿಗಳಿಗೆ ಅನುಮತಿ ಕೋರಿ ಸಲ್ಲಿಸುವ ಅರ್ಜಿಗಳ ಮೇಲೆ ನಗರ ವಿಶೇಷ ವಿಭಾಗದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಭಾಗವನ್ನು ಖುದ್ದಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ.

2. **ದಂಡನೀಯ ಶಾಖೆ, ಪೊಲೀಸ್ ಆಯುಕ್ತರ ಕಛೇರಿ, ಹುಬ್ಬಳ್ಳಿ–ಧಾರವಾಡ ನಗರ–ದೂರವಾಣಿ ಸಂಖ್ಯೆ: 2233522.**

   ಸಾರ್ವಜನಿಕರು ಆತ್ಮರಕ್ಷಣೆಗಾಗಿ ಆಯುಧಗಳನ್ನು ಹೊಂದಲು ರಹದಾರಿ ಪಡೆಯಲು, ಸ್ಫೋಟಕ ವಸ್ತುಗಳ ಸಾಗಾಣಿಕೆಗಾಗಿ ನಿರಾಕ್ಷೇಪಣೆ ಪತ್ರ ಪಡೆಯಲು ಹಾಗೂ ಪೆಟ್ರೋಲ್ ಬಂಕ್‌ಗಳನ್ನು ತೆರೆಯಲು ನಿರಾಕ್ಷೇಪಣಾ ಪತ್ರ ಪಡೆಯಲು ಕೋರಿ ಸಲ್ಲಿಸುವ ಅರ್ಜಿಗಳ ಮೇಲೆ ದಂಡನೀಯ ಶಾಖೆಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(ಆರ್.ದಿಲೀಪ್.ಐಪಿಎಸ್)
**ಪೊಲೀಸ್ ಕಮಿಷನರ್,**
**ಹುಬ್ಬಳ್ಳಿ–ಧಾರವಾಡ ನಗರ.**

ದಿನಾಂಕ: 31-12-2019 ರ ಅಂತ್ಯಕ್ಕೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಷನರೇಟ ಘಟಕದಲ್ಲಿದ್ದ ಹುದ್ದೆಗಳ (ಎಸ್.ಓ 1008 ರನ್ವಯ ವಿಶೇಷ ಘಟಕಗಳ ಬಲವನ್ನು ಸೇರಿಸಿಕೊಳ್ಳಲಾಗಿದೆ ಅಲಾನಿ, ರಾಜ್ಯ ಗುಪ್ತವಾರ್ತೆ, ಹೆಸ್ಕಾಂ & ಐಎಸ್‌ಡಿ ಗೆ ಮಂಜೂರಾದ ಹುದ್ದೆಗಳು ಸೇರಿ) ವಿವರ.

| ಕ್ರ.ಸ | ಹುದ್ದೆ | ವಾಸ್ತವ ಮಂಜೂರಾತಿ ಬಲ | ಎಸ್.ಓ 1008 ಮಂಜೂರಾತಿ ಬಲ | ಒಟ್ಟು | ಹಾಲಿ ಬಲ | | ಒಟ್ಟು | ಎಸ್.ಓ 1008 ಹಾಲಿ ಬಲ | | ಒಟ್ಟು | ರಿಕ್ತಸ್ಥಾನ | ಎಸ್.ಓ 1008 ರಿಕ್ತಸ್ಥಾನ |
|---|---|---|---|---|---|---|---|---|---|---|---|---|
| | | | | | ಪುರುಷ | ಮಹಿಳಾ | | ಪುರುಷ | ಮಹಿಳಾ | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | | | | | **ಸಿವ್ಹಿಲ್** | | | | | | | |
| 1 | ಸಿಪಿ | 01 | - | 01 | 01 | – | 01 | – | – | - | - | - |
| 2 | ಡಿಸಿಪಿ | 02 | - | 02 | 02 | – | 02 | – | – | - | - | - |
| 3 | ಎಸಿಪಿ | 05 | - | 05 | 04 | 01 | 05 | – | – | - | - | - |
| 4 | ಪಿಐ | 29 | - | 29 | 26 | – | 26 | – | – | - | 03 | - |
| 5 | ಪಿಎಸ್‌ಐ | 49 | 04 | 53 | 25 | 10 | 35 | – | – | - | 14 | 04 |
| 6 | ಎಎಸ್‌ಐ | 190 | 01 | 191 | 164 | 26 | 190 | – | – | - | – | 01 |
| 7 | ಸಿಹೆಚ್‌ಸಿ | 462 | 10 | 472 | 428 | 34 | 462 | 06 | 01 | 07 | – | 03 |
| 8 | ಸಿಪಿಸಿ | 958 | 24 | 982 | 631 | 96 | 727 | 11 | 01 | 12 | 231 | 12 |
| | **ಒಟ್ಟು** | 1696 | 39 | 1735 | 1281 | 167 | 1448 | 17 | 02 | 19 | 248 | 20 |
| | | | | | **ಸಶಸ್ತ್ರ** | | | | | | | |
| 1 | ಡಿಸಿಪಿ | 01 | - | 01 | 01 | – | 01 | – | – | - | - | - |
| 2 | ಆರ್.ಪಿಐ | 03 | - | 03 | 03 | – | 03 | – | – | - | - | - |
| 3 | ಆರ್.ಎಸ್.ಐ | 12 | 02 | 14 | 11 | – | 11 | – | – | - | 01 | 02 |
| 4 | ಎಆರ್‌ಎಸ್‌ಐ | 59 | 03 | 62 | 59 | – | 59 | – | – | - | - | 03 |
| 5 | ಎಹೆಚ್‌ಸಿ | 172 | 12 | 184 | 172 | – | 172 | 02 | – | 02 | - | 10 |
| 6 | ಎಪಿಸಿ | 356 | 16 | 372 | 303 | – | 303 | – | – | - | 43 | 16 |
| | **ಒಟ್ಟು** | 603 | 33 | 636 | 549 | - | 549 | 02 | - | 02 | 44 | 31 |

## ಲಿಪಿಕ ಸಿಬ್ಬಂದಿ ಮತ್ತು ತಾಂತ್ರಿಕ ಸಿಬ್ಬಂದಿಗಳ ವಿವರ

| ಕ್ರ ಸ | ಹುದ್ದೆ | ವಾಸ್ತವ ಮಂಜೂರಾತಿ ಬಲ | ಹಾಲಿ ಬಲ | | ಒಟ್ಟು | ರಿಕ್ತಸ್ಥಾನ |
|---|---|---|---|---|---|---|
| | | | ಪುರುಷ | ಮಹಿಳಾ | | |
| | | **ನಿಸ್ತಂತು ಘಟಕ** | | | | |
| 1 | ಎಸಿಪಿ(ನಿ) | 1 | – | – | – | 1 |
| 2 | ಪಿಐ(ನಿ) | 2 | 2 | – | 2 | - |
| 3 | ಪಿಎಸ್‌ಐ(ನಿ) | 3 | 3 | – | 3 | – |
| 4 | ಎಎಸ್‌ಐ(ನಿ) | 6 | 5 | – | 5 | 1 |
| 5 | ಹೆಚ್(ನಿ) | 4 | - | – | - | 4 |
| 6 | ಪಿಸಿ(ನಿ) | 5 | 4 | – | 4 | 1 |
| | **ಒಟ್ಟು** | 21 | 14 | – | 14 | 07 |

| | | | | | | |
|---|---|---|---|---|---|---|
| ಬೆರಳು ಮುದ್ರೆ ಘಟಕ | | | | | | |
| 1 | ಎಸಿಪಿ | 1 | 1 | – | 1 | – |
| 2 | ಪಿಎಸ್ಐ | 1 | 1 | – | 1 | – |
| 3 | ಹೆಚ್‌ಸಿ | 1 | 1 | - | 1 | - |
| 4 | ಪಿಸಿ | 1 | 1 | – | 1 | – |
| | ಒಟ್ಟು | 4 | 4 | - | 4 | - |

| | | | | | | |
|---|---|---|---|---|---|---|
| ಲಿಪಿಕ ಸಿಬ್ಬಂದಿಗಳು | | | | | | |
| 1 | ಎಎಓ | 1 | 1 | – | 1 | – |
| 2 | ಶಾಖಾಧೀಕ್ಷಕರು | 4 | 4 | – | 4 | – |
| 3 | ಪ್ರ.ದ.ಸ | 10 | 7 | 3 | 10 | - |
| 4 | ದ್ವಿ.ದ.ಸ | 9 | 5 | 4 | 9 | – |
| 5 | ಶೀಘ್ರಲಿಪಿಗಾರರು | 4 | 3 | 1 | 4 | – |
| 6 | ಬೆರಳಚ್ಚುಗಾರರು | 7 | 0 | 1 | 1 | 6 |
| 7 | ದಲಾಯತ | 6 | 3 | 3 | 6 | – |
| 8 | ಜಾಡುಮಾಲಿ | 4 | - | 4 | 4 | - |
| | **ಒಟ್ಟು** | **45** | **23** | **16** | **39** | **6** |

ಅನುಬಂಧ –1


COP
DCP [ L & O ]
DCP [ HQ, C & T ]
DCP [ CAR ]
Jr Law Officer
ACP, SOUTH HUBLI
PI GHANTIKERI P.S.
PI BENDIGERI P.S.
PI OLD HUBLI P.S.
PI KASBAPETH P.S.
PI TOWN P.S.
PI CSB
ACP NORTH HUBLI
PI HUBLI SUB-URBAN
PI VIDYANAGAR P.S.
PI GOKUL ROAD P.S.
PI KAMARIPETH P.S.
PI KESHWAPUR P.S.
PI MAHILA P.S.
APMC NAVANAGAR
ASOHKNAGAR
ACP DHARWAD
PI DWD TOWN P.S.
PI DWD VIDYAGIRI
PI DWD SUBURBAN
ACP TRAFFIC
NORTH TRAFFIC P.S. HUBLI
SOUTH TRAFFIC P.S. HUBLI
DHARWAD TRAFFIC P.S.
HUBLI EAST TRAFFIC P.S.
ACP, CCRB
CCB
CCIB